ಬೈಂದೂರು – ಕೊಲ್ಲೂರುಗಳಿಗೆ ಸುವಿಹಾರಿ ಬಸ್ ವ್ಯವಸ್ಥೆ.

125. ಶ್ರೀ ಜಿ.ಎಸ್. ಆಚಾರ್, (ಬೈಂದೂರು):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಿಂದ ಶಿವಮೊಗ್ಗ ಕುಂದಾಪುರ ಮಾರ್ಗವಾಗಿ ಬೈಂದೂರಿಗೆ ಮತ್ತು ಹಾಸನ ಮಂಗಳೂರು ಬಾರ್ಕೂರು ವಂಡಸೆ ಮಾರ್ಗವಾಗಿ ಕೊಲ್ಲೂರಿಗೆ ಸುವಿಹಾರಿ ಬಸ್ಸುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೂಲಕ ಪ್ರತಿದಿನ ಓಡಿಸಲು ಸಾರ್ವಜನಿಕರಿಂದ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈಗ ಇರುವ ಬಸ್ಸು ವ್ಯವಸ್ಥೆ ಅಸಮರ್ಪಕವಾದ್ದರಿಂದ ಆದಷ್ಟು ಬೇಗ ಸದರಿ ಬಸ್ ಓಡಾಟ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಕೆಳಗಿನಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 3 ಸುತ್ತುವಳಿಗಳನ್ನು ಬೆಂಗಳೂರು, ಭಟ್ಕಳ ಮಾರ್ಗ ತುಮಕೂರು, ತಿಪಟೂರು, ಅರಸೀಕೆರೆ, ಶಿವಮೊಗ್ಗ, ಹೊಸನಗರ, ಕೊಲ್ಲೂರು ಮತ್ತು ಬೈಂದೂರು ಓಡಿಸಲಾಗುತ್ತಿದೆ. ಇದರ ಪೈಕಿ ಒಂದು ಸುವಿಹಾರಿ, ಒಂದು ಆರೆ ಸುಖಾಸೀನ, ಮತ್ತೊಂದು ವೇಗದೂತ ವಾಹನಗಳಾಗಿ ಓಡಿಸಲಾಗುತ್ತಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನ ಅವ್ಯವಸ್ಥೆ.

205. ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಾದ್ಯಂತ ರಾಜ್ಯ ರಸ್ತೆ ಸಾರಿಗೆ ಬಸ್ಸಿನ ಓಡಾಟ ವ್ಯವಸ್ಥಿತವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥೆಯನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) – ಹೌದು –

ಆ) – ಹೌದು –

ಬೆಂಗಳೂರಿನಿಂದ ಕಳಸ – ಹೊರನಾಡಿಗೆ ಬಸ್ಸಿನ ಅವಶ್ಯಕತೆ

206. ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಿಂದ – ಕಳಸ – ಹೊರನಾಡಿಗೆ ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳನ್ನು ಪ್ರಾರಂಭಿಸುವ ಕುರಿತು ಸರಕಾರಕ್ಕೆ ಮನವಿಗಳು ಬಂದಿರುವುದು ನಿಜವಲ್ಲವೆ ?